(b) the number of candidates appointed as teachers among selected candidates ?

SMT. NAGAMMA C. KESHAVAMURTHY (Minister of State for Primary and Secondary Education).—

(a) No

(b) This question does not arise.

Construction of Bridge across Kallahalla of Dharwar District.

916 SRI F. S. PATIL (Kalghatagi).—Will the Minister for Public Works be pleased to state :—

(a) whether it has come to the notice of the Government that the petitions received from the general public of 10–15 villages surrounding Galagi Hulakoppa villages requesting for construction of a bridge across Kallahalla near Hulakoppa Village on Public Works Department road between Banadur and Chalamatta villages in Kalghatagi taluk of Dharwar District ;

(b) whether it has come to the notice of the Government that hardship is being caused for travelling to the people of 10–15 villages which are by the side of this road due to non-construction of a bridge ;

(c) whether plans and estimates of this bridge have been prepared ;

(d) the approximate expenditure to be incurred for this bridge ;

(e) the reasons for not commencing the work of this bridge so far ?

SRI KAGODU THIMMAPPA (Minister for Public Works).—

(a) Yes, petitions have been received.

(b) Yes

(c) Yes

(d) About Rs. 1.50 lakhs.

(e) Not commenced due to paucity of funds

REPRESENTATIONS

SRI SHEERNALLY CHANDRASHEKAR.—Sir, I have given a notice of breach of privilege against Mr Bangarappa three days back. ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯು ಎಲ್ಲಾ ಅಧ್ಯಕ್ಷರುಗಳಿಗೂ ಮತ್ತು ಪದಾಧಿಕಾರಿಗಳಿಗೂ ಸಹ ಲಕ್ಷಾಂತರ ರೂಪಾಯಿಗಳ ಹಣವನ್ನು ವಸೂಲಿ ಮಾಡಿಕೊಂಡು ಬರಬೇಕೆಂದು ಸರ್ಕಾರ ಆಜ್ಞೆ ಮಾಡಿದೆ ಎಂದು ಅವರು ಹೇಳಿದರು.

ಅಧ್ಯಕ್ಷರು.—ತಾವು ಏನು ನೋಟೀಸ್ ಕೊಟ್ಟಿದ್ದೀರಿ ನೋಡಿ, ಆದರ ಪ್ರಕಾರವಾಗಿ ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅವರು ಈ ಸಭೆಯನ್ನು ತಪ್ಪುದಾರಿಗೆ ಎಳೆದಿದ್ದಾರೆ .....without producing even the telegram he has made certain allegations on the floor of this House. So, that amounts to contempt of previlege.

ಅದಕ್ಕೆ ವಿವರಣೆ ಕೊಡಲಿಕ್ಕೆ ಅಪ್ಪಣೆ ಕೊಟ್ಟರೆ ಕೊಡುತ್ತೇನೆ.

ಅಧ್ಯಕ್ಷರು.—ತಾವು ಬರೆದಿರುವುದು, ರೂಲ್ ೧೭೭ರ ಕೆಳಗೆ ಚರ್ಚೆ ಮಾಡಲು ಅವಕಾಶ ಕೊಡಿ ಎಂದು. ಆದರಲ್ಲಿ ಹೇಗಾಗುತ್ತದೆ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಬೇರೆ ಯಾವ ರೂಲ್ಸ್ ಸಿಗಲಿಲ್ಲ.

MR. SPEAKER.—The Hon. Member must not misuse the rules.

SRI S. M. SHEERNALY CHANDRASHEKAR.—I am not misusing.

ಅಧ್ಯಕ್ಷರು.—ರೂಲ್ ೧೭೭ರ ಕೆಳಗೆ ತೆಗೆದುಕೊಳ್ಳಿ ಎಂದರೆ ಹೇಗಾಗುತ್ತದೆ ; ಅದು ಪ್ರಿವಿಲೇಜ್ ಹೇಗಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಆಗುತ್ತದೆಂದು ಹೇಳುತ್ತಿದ್ದೇನೆ, ಅಂತೆಯೇ ನೋಟೀಸ್ ಕೊಟ್ಟಿದ್ದೇನೆ. ಈ ಸಭೆಯನ್ನು ತಪ್ಪು ದಾರಿಗೆ ಎಳೆದಿದ್ದಾರೆ.

ಅಧ್ಯಕ್ಷರು.—ಹಾಗೆಂದಾಕ್ಷಣ ಆಗುತ್ತದೆಯೇ ? ಹೇಗೆ ಆಗುತ್ತದೆ ಹೇಳಿ.

SRI S. M. SHEERNALY CHANDRASHEKAR.—You are the supreme authority to give decision. This is my humble submission.

MR. SPEAKER.—You have to substantiate your privilege.

SRI S. M. SHEERNALY CHANDRASHEKAR —I want to explain to you. Sri Bangarappa played a drama on that day just to cast aspersions on the Chief Minister and on the Administration.

ಶ್ರೀ ಎಸ್. ಆರ್. ಬೊಮ್ಮಾಯಿ —ನಾನು ಕ್ರಿಯಾಲೋಪವನ್ನೆತ್ತುತ್ತೇನೆ. ಮಾನ್ಯ ಸದಸ್ಯರಿಗೆ ನೋಟೀಸ್ ಕೊಡಲಿಕ್ಕೆ ಅಧಿಕಾರ ಇದೆ. ಆದರೆ ಮಾತನಾಡುವಾಗ, 'ಡ್ರಾಮಾ ಆಡಿದರು' ಈ ತರಹ ಭಾಷೆಯನ್ನು ಉಪಯೋಗಿಸುವುದು ತರವಲ್ಲ. ಒಬ್ಬ ಸದಸ್ಯರಿಗೆ ಮತ್ತೊಬ್ಬ ಸದಸ್ಯರು ಗೌರವ ಕೊಡ ಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಯಾವ ತರಹದ ಭಾಷೆಯನ್ನು ಉಪಯೋಗಿಸ ಬೇಕು ?

ಅಧ್ಯಕ್ಷರು.—ಅದನ್ನು ನೀವು ಯೋಚನೆ ಮಾಡಬೇಕು ಯಾವ ಶಬ್ದವನ್ನು ಉಪಯೋಗಿಸಬೇಕು, ಯಾವ ಭಾಷೆಯನ್ನು ಉಪಯೋಗಿಸಬೇಕೆಂಬುದನ್ನು ಸದಸ್ಯರು ಆಲೋಚನೆ ಮಾಡಬೇಕು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನನ್ನ ತಿಳುವಳಿಕೆಗೆ ತಿಳಿದ ಭಾಷೆಯನ್ನು ಉಪ ಯೋಗಿಸಿದ್ದೇನೆ. ತಪ್ಪಿದ್ದರೆ ವಾಪಸ್ಸು ತೆಗೆದುಕೊಳ್ಳುತ್ತೇನೆ. ಫೈನ್ ಬೇಕಾದರೆ ಹಾಕಿ.

ಅಧ್ಯಕ್ಷರು.—ಹಾಗೆಲ್ಲಾ ಲಘುವಾಗಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಸರಿಯಾಗಿದ್ದರೆ ಸರಿ ಎಂದು ಸಮರ್ಥಿಸಬಹುದು. ಇಲ್ಲದಿದ್ದರೆ ವಾಪಸ್ಸು ತೆಗೆದುಕೊಳ್ಳುತ್ತೇನೆಂದು ಹೇಳಬೇಕು. ಅದನ್ನು ಬಿಟ್ಟು ಯಾವುದನ್ನು ಉಪಯೋಗಿಸಬೇಕೆಂದು ಕೇಳಿದರೆ ಹೇಗಾಗುತ್ತದೆ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಬಂಗಾರಪ್ಪನವರು ಯಾವ ನೋಟೀಸು ಕೊಡದೆ ಏಕಾಏಕಿ ಪ್ರಸ್ತಾಪಿಸಿದರು.

ಅಧ್ಯಕ್ಷರು.—ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದೀರಿ. You please confine yourself to your notice as such. Do you have a copy of your notice ?

SRI S M. SHEERNALY CHANDRASHEKAR, —I don't have.

MR. SPEAKER.—For your information I will read your notice

"Under rule 177 I raise a matter of privilege against Sri..... .....hon. member for having misled the House on 27-7-82 quoting a telegram, which has not been produced, issued by the President, Chamber of Commerce to all the regulated market committees in the State of Karnataka".

ಇದು ಹೇಗೆ ಪ್ರಿವಿಲೇಜ್ ಆಗುತ್ತದೆ? ರೂಲ್ ೧೭೭ರ ಪ್ರಕಾರ ಪ್ರಿವಿಲೇಜ್ ಆಗುತ್ತದೆಯೆ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅದನ್ನೇ ಹೇಳಲಿಕ್ಕೆ ಬಿಡುತ್ತಿಲ್ಲವಲ್ಲ.

MR. SPEAKER.—You don't have even a copy of the notice that you have given.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ನೋಟೀಸನ್ನು ಕೈಬರವಣಿಗೆಯಲ್ಲಿ ಬರೆದು ಕೊಟ್ಟಿದ್ದೇನೆ, ಆದ್ದರಿಂದ, ಅದರ ಕಾಪಿ ನನ್ನ ಹತ್ತಿರ ಇಲ್ಲ. ನಾನು ಸವಿನಯವಾಗಿ ಪ್ರಾರ್ಥಿಸುವುದೇನೆಂದರೆ, ಅವರು ಟೆಲಿಗ್ರಾಂ ಅನ್ನು ಪ್ರೊಡ್ಯೂಸ್ ಮಾಡಬೇಕಾಗಿತ್ತು. ಟೆಲಿಗ್ರಾಂ ಕೊಡದೆ, ಯಾವ ಕಾರಣಕ್ಕಾಗಿ ಕೊಟ್ಟಿದ್ದಾರೆಂಬುದು ಗೊತ್ತಿಲ್ಲದೆ ಸುಮ್ಮನೆ ಸದನವನ್ನು ತಪ್ಪುದಾರಿಗೆ ಎಳೆಯುವುದು ಸರಿಯಲ್ಲ.

MR. SPEAKER.—There is no privilege. Why do you unnecessarily...

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸುಪ್ರೀಂ ಕೋರ್ಟಿಗೆ ಕೇಸ್ ಹಾಕಂವುದಕ್ಕೆ ಎಲ್ಲ ರೆಗ್ಯುಲೇಟೆಡ್ ಮಾರ್ಕೆಟ್ ಅಧ್ಯಕ್ಷರನ್ನು ಬರವಾಡಿಕೊಂಡದ್ದು ತಪ್ಪಾಗುವುದಿಲ್ಲವೆ ?

MR. SPEAKER.—There is no privilege. Your notice as such will not attract the provisions of Rule 177.

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.—ಹಾಗಾದರೆ ನನಗೆ ಯಾವುದಾದರೂ ರೀತಿಯಲ್ಲಿ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶ ಕೊಡಿ. ತಾವು ಓವರ್ ರೂಲ್ ಮಾಡುವುದಾದರೆ ಮಾಡಿ.

MR. SPEAKER.—You are not supposed to misuse the provisions for your own ends. You cannot. You please think about the matter and raise it in what form you want to raise. It is not for me.

ಶ್ರೀ ಜೆ. ಹೆಚ್. ಪಟೇಲ್.—ಇವರು ವಿವರಣೆ ಕೊಡುವುದಾದರೆ ಬಂಗಾರಪ್ಪನವರು ಇದ್ದಾಗ ಕೊಡಲಿ. ಅವರು ಇಲ್ಲವಾಗ ಬಹಳ ಮಾತನಾಡುತ್ತಾರೆ.

SRI B. B. SAYANAK.—Mr. Speaker Sir, I have given a call attention notice today. There was heavy rainfall in Belgaum two days back.

MR. SPEAKER.—I have not seen your notice. I will look into it.

ಶ್ರೀ ಟಿ ಚೌಡಯ್ಯ.—ಚಿತ್ರದುರ್ಗ ಜಿಲ್ಲೆಯಲ್ಲಿ ವ್ಯಾಪಕವಾಗಿ ಮಳೆ ಇಲ್ಲದೆ ವ್ಯವಸಾಯಕ್ಕೆ ಬಹಳ ತೊಂದರೆಯಾಗಿದೆ.

ಅಧ್ಯಕ್ಷರು.— ಆ ಬಗ್ಗೆ ಕಂದಾಯ ಮಂತ್ರಿಗಳು ಹೇಳಿಕೆ ನೀಡಲಿದ್ದಾರೆ.

ಶ್ರೀ ಎಂ. ಸಿ. ಬಸಪ್ಪ.—ಅಭಾವ ಪರಿಸ್ಥಿತಿ ಬಗ್ಗೆ ಎರಡೂವರೆ ಗಂಟೆ ಚರ್ಚೆಗೆ ಅವಕಾಶ ಮಾಡಿ ಕೊಡುತ್ತಾರೆಂದು ಕೇಳಿದೆ.

ಅಧ್ಯಕ್ಷರು.—ಎರಡೂವರೆ ಗಂಟೆ ಎಂದು ಹೇಳಲಿಲ್ಲ. ಬಹಳ ಜನ ಮಾನ್ಯ ಸದಸ್ಯರು ಮಳೆ ಬಾರದೆ ತೊಂದರೆಯಾಗಿದೆ. ಕುಡಿಯುವ ನೀರಿಗೆ ತೊಂದರೆಯಾಗಿದೆ, ಬಿತ್ತನೆಗೆ ತೊಂದರೆಯಾಗಿದೆ ಇತ್ಯಾದಿಯಾಗಿ ಪ್ರಶ್ನೆ ಕೇಳಿ ಗಮನ ಸೆಳೆಯುವ ಸೂಚನೆ, ಮುಂತಾದವುಗಳನ್ನು ಕಳುಹಿಸಿದ್ದಾರೆ. ಆ ಬಗ್ಗೆ ಕಂದಾಯ ಸಚಿವರನ್ನು ಕೇಳಿಕೊಂಡಿದ್ದೇವೆ. ಅವರು ಹೇಳಿಕೆ ನೀಡುತ್ತಾರೆ, ನಂತರ ಬೇಕಾದರೆ ಕಾಲವನ್ನು ನಿಗದಿ ಮಾಡಿ ಚರ್ಚೆ ಮಾಡಬಹುದು.

ಶ್ರೀ ಎಂ. ಸಿ. ಬಸಪ್ಪ.—ಆಮೇಲೆ ಎರಡೂವರೆ ಗಂಟೆ ಚರ್ಚೆಗೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ನೋಡೋಣ ಮೊದಲು ಮಂತ್ರಿಗಳು ಹೇಳಿಕೆ ನೀಡಲಿ. After the statement by the Minister, I will take the consensus of the House.

ಶ್ರೀ ಎಂ. ಸಿ. ಬಸಪ್ಪ.—ಸಾಮಾನ್ಯವಾಗಿ ಕೊನೇ ಗಳಿಗೆಯಲ್ಲಿ ಹೇಳಿಕೆ ನೀಡುತ್ತಾರೆ.

MR. SPEAKER.—It will not be brushed aside like that.

SRI T. CHOWDAIAH.—Sir, I have given a call-attention notice regarding the service matters in universities. A great injustice has been done to one doctor who has got twenty years of teaching experience and as reader in chemistry and also teaching in post-graduation. ಅಂಜನ ಮೂರ್ತಿ ಎಂಬುವವರು ೨೦ ವರ್ಷಗಳ ಕಾಲ ಕೆಮಿಸ್ಟ್ರಿ ರೀಡರ್ ಆಗಿ ಕೆಲಸ ಮಾಡಿದ್ದಾರೆ. ಅದರ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಆ ಬಗ್ಗೆ ವರದಿಯನ್ನು ಕೇಳಿದ್ದೇವೆ, ವರದಿ ಬರಲಿ.

SRI B. B. SAYANAK.—Sir, tomorrow is the last date of this Session. About hundred houses have collapsed due to heavy rainfall in Belgaum. The poor people are suffering.

MR. SPEAKER.—You have just now given the notice. I have to look into it. I am aware of it.

ಶ್ರೀ ಕೆ. ಬಿ. ಶಿವಯ್ಯ.—ನಾನು ಅಭಾವ ಪರಿಸ್ಥಿತಿ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟು ಬಹಳ ದಿವಸವಾಗಿದೆ.

ಅಧ್ಯಕ್ಷರು.—ಎಲ್ಲರದ್ದೂ ಒಟ್ಟಿಗೆ ಬರುತ್ತದೆ, ಎಲ್ಲರಿಗೂ ಒಟ್ಟಿಗೇ ಉತ್ತರ ದೊರೆಯುತ್ತದೆ.

ಶ್ರೀ ವಿ. ಮಸಿಯಪ್ಪ.—ನಾಳೆ ಅಸೆಂಬ್ಲಿ ಮುಗಿಯುತ್ತದೆ; ರೆವಿನ್ಯೂ ಸಚಿವರೂ ಹೇಳಿಕೆ ನೀಡಿದ ಮೇಲೆ ಚರ್ಚೆ ಮಾಡುವುದಕ್ಕೆ ವೇಳೆ ಎಲ್ಲಿರುತ್ತದೆ ?

ಶ್ರೀ ಎಂ. ಷೇರ್‌ಖಾನ್.—ಹೆಲ್ಮೆಟ್ ಅನ್ನು ತೆಗೆದು ಹಾಕುವ ಬಗ್ಗೆ ಪ್ರಶ್ನೆ ಕೇಳಿದ್ದೆ. ಆ ಬಗ್ಗೆ ಪೂರ್ಣ ಮಾಹಿತಿ ಬಂದಿಲ್ಲವೆಂದು ಪ್ರಶ್ನೆಯನ್ನು ತಡೆಹಿಡಿದಿದ್ದೀರಿ. ಆದ್ದರಿಂದ, ನಾಳೆಯಾದರೂ ಅದಕ್ಕೆ ಉತ್ತರ ಕೊಡಿಸಿ.

ಅಧ್ಯಕ್ಷರು.—ಅದನ್ನು ತೆಗೆಸಿ ನೋಡುತ್ತೇನೆ.

ಶ್ರೀ ಎ. ಬಿ. ಪಾಟೀಲ್.—ಕೆ.ಇ.ಬಿ.ಯವರು ಐ. ಪಿ. ಸೆಟ್ಸ್‌ಗೆ ಉಪಯೋಗಿಸತಕ್ಕ ಕರೆಂಟನ್ನು ಡಿಸ್‌ಕನೆಕ್ಷನ್ ಮಾಡುವುದರಿಂದ ರೈತರು ಬಹಳ ತೊಂದರೆಯಲ್ಲಿದ್ದಾರೆ; ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟರೂ ಕನೆಕ್ಷನ್ ಕೊಡುತ್ತಿಲ್ಲ. ಆ ಬಗ್ಗೆ ೩ ದಿನಗಳ ಕೆಳಗೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಅದನ್ನು ನೋಡುತ್ತೇನೆ

ಶ್ರೀ ಎ. ಲಕ್ಷ್ಮೀಸಾಗರ್.—ಬೆಂಗಳೂರಿನಲ್ಲಿ ಸೌತ್ ಸರ್ಕಲ್‌ನಲ್ಲಿ ೧೧೧ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಸಂಬಳ ಕೊಡುತ್ತಿಲ್ಲ. ಜೂನ್ ತಿಂಗಳ ಸಂಬಳವನ್ನು ಇದುವರೆಗೆ ಕೊಟ್ಟಿಲ್ಲವೆಂದು ಉಪಾಧ್ಯಾಯರು ಬಂದಿದ್ದಾರೆ. ರಾಜ್ಯ ಸಚಿವರಿಗೆ ಈ ವಿಷಯ ತಿಳಿಸಿದ್ದೇನೆ; ವಿಚಾರ ಮಾಡಿ ಹೇಳುವುದಾಗಿ ಹೇಳಿದ್ದಾರೆ.

ಅಧ್ಯಕ್ಷರು.—ಅದನ್ನು ನಂತರ ಪ್ರಸ್ತಾಪ ಮಾಡಿ.

ಶ್ರೀ ಕೆ. ಎಚ್. ಹನುಮೇಗೌಡ.—ನಾನು ಒಂದು ತಿಂಗಳ ಹಿಂದೆ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿಕೊಟ್ಟಿದ್ದೆ. ಹಾಸನ ಪಟ್ಟಣದಲ್ಲಿ ಹುಡ್ಕೋ ಸ್ಕೀಮಿನಲ್ಲಿ ಕಟ್ಟಿರುವ ಮನೆಗಳಿಗೆ ಹತ್ತು ವರ್ಷಗಳ ಹಿಂದೆ ಅಪ್ಲಿಕೇಷನ್ ಕಾಲ್‌ಫರ್ ಮಾಡಿ ಜನರಿಂದ ದುಡ್ಡು ಕಟ್ಟಿಸಿಕೊಂಡರು. ಆದರೆ ಈಗ ೧೭–೧೮ ಸಾವಿರ ರೂಪಾಯಿ ಮನೆಗೆ ೪೭ ಸಾವಿರ ರೂಪಾಯಿ ಕಟ್ಟಬೇಕೆಂದೂ, ೪೫ ಸಾವಿರ ಮನೆಗೆ ೧ ಲಕ್ಷ ರೂಪಾಯಿ ಕಟ್ಟಬೇಕೆಂದೂ ನೋಟೀಸ್ ಕೊಟ್ಟಿದ್ದಾರೆ. ದುಡ್ಡು ಕಟ್ಟಿ ಹತ್ತು ವರ್ಷವಾದಮೇಲೆ ಒರದಕ್ಕೆ ಮೂರರಷ್ಟು ನಾಲ್ಕರಷ್ಟು ದುಡ್ಡನ್ನು ಕೇಳುತ್ತಿದ್ದಾರೆ. ಈ ರೀತಿ ಮಾಡಿದರೆ ಹೇಗೆ ? ನಾಳೆ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದಾದರೆ ನನ್ನ ಆಭ್ಯಂತರವಿಲ್ಲ.

ಅಧ್ಯಕ್ಷರು.—ತಾವು ಕೊಟ್ಟಿದ್ದನ್ನು ಅವರು ನೋಡಬೇಕಲ್ಲ ?

ಶ್ರೀ ಕೆ. ಎಚ್. ಹನುಮೇಗೌಡ.—ಒಂದು ತಿಂಗಳಾಯಿತು ಕಳುಹಿಸಿ. ನೋಡಿದ್ದಾರೆ.

ಅಧ್ಯಕ್ಷರು.—ನೀವು ನೆನ್ನೆ ನೋಟೀಸ್ ಕೊಟ್ಟಿದ್ದೀರಿ.

ಶ್ರೀ ಕೆ. ಎಚ್. ಹನುಮೇಗೌಡ.—ಒಂದು ತಿಂಗಳಾಯಿತು, ನಿನ್ನೆ ಅಲ್ಲ.

ಅಧ್ಯಕ್ಷರು.—ನಾನು ನೋಡುತ್ತೇನೆ.

ಶ್ರೀ ಕೆ. ರಾಮಭಟ್.—ಮಂಗಳೂರಿನಲ್ಲಿ ಅನೇಕ ಜನ ಲೋಕಲ್ ಕ್ಯಾಂಡಿಡೇಟ್ಸನ್ನು ಕೆಲಸದಿಂದ ತೆಗೆದಿದ್ದಾರೆ.

ಅಧ್ಯಕ್ಷರು.—ಎಲ್ಲಿ ?

ಶ್ರೀ ಕೆ. ರಾಮಭಟ್,—ಟ್ರಿಬ್ಯುನಲ್ ಮುಂತಾದ ಕಡೆಗಳಲ್ಲಿ.

ಅಧ್ಯಕ್ಷರು.—ಅದನ್ನು ಪ್ರಸ್ತಾಪ ಮಾಡಿದ್ದೀರಲ್ಲ.

ಶ್ರೀ ಕೆ. ರಾಮಭಟ್.—ಮಾಡಲಿಲ್ಲ. ಚರ್ಚೆಗೆ ಉತ್ತರ ಕೊಡುವಾಗ ವಿವರವಾಗಿ ಹೇಳುತ್ತೇನೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಮಂತ್ರಿಗಳು ಬರಲಿ, ನನ್ನ ಹತ್ತಿರ ವಾದ ಮಾಡಿದರೆ ಏನು ಪ್ರಯೋಜನ ?

ಶ್ರೀ ಕೆ. ರಾಮಭಟ್.—ಆಗಲಿ ಆಮೇಲೆ ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಲ್ಕನೇ ದರ್ಜೆ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ರಾಮಸಿಂಗ್ ಎಂಬುವರು ಉಪವಾಸ ಕುಳಿತಿದ್ದಾರೆ. ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಅವರ ಬೇಡಿಕೆಗಳನ್ನು ಹೋದಸಲ ಹಣಕಾಸಿನ ಮಂತ್ರಿಗಳು ಒಪ್ಪಿ ಕೊಂಡಿದ್ದರು. ಅವರದೇನೂ ಹೆಚ್ಚಿನ ಬೇಡಿಕೆ ಇಲ್ಲ. ೮–೧೦ ಬೇಡಿಕೆಗಳನ್ನಿಟ್ಟಿದ್ದಾರೆ.

ಅಧ್ಯಕ್ಷರು.—ಹಣಕಾಸಿನ ಮಂತ್ರಿಗಳು ಆ ಮನೆಯಲ್ಲಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಬೇಡಿಕೆ ನ್ಯಾಯವಾಗಿದೆ. ಅವರು ಕಟ್ಟುನಿಟ್ಟಾಗಿ ಉಪವಾಸ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಕೆಲವರು ಸುಮ್ಮನೆ ಉಪವಾಸ ಮಾಡುತ್ತಾರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನೀರೂ ಕೂಡ ಕುಡಿಯುತ್ತಿಲ್ಲ. ಆದ್ದರಿಂದ ಹೇಳಿದೆ.

ಅಧ್ಯಕ್ಷರು.—ಅರ್ಥಮಂತ್ರಿಗಳು ಆ ಮನೆಯಲ್ಲಿದ್ದಾರೆ ; ಅವರು ಬರಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಂದಮೇಲೆ ಉತ್ತರ ಕೊಡಿಸಿ.

SRI M. C. NANAIAH.—Sir, on 24th of this month I have given a notice under rule 293 and further requested the Hon'ble Speaker to direct the Government to produce concerned file in respect of which certain statement has been made against me by the Hon'ble Chief Minister while speaking on the demands. Sir, in my speech I have made it very clear that during my office as Minister for Forest I have not made any fresh grant or allotment of timber to any individual or to any firm. If there are allotments made during that period let them produce that file. I have urged upon the Government produce that file.

MR. SPEAKER.—I have received the notice.

SRI M. C. NANAIAH.—I would like to know the order passed by me. I am entitled to look into that order. Let them read that order. Let the entire House know whether an order has been passed by me. I therefore request the Hon'ble Speaker to call for the concerned file so that the House would see what orders I have passed. I once agtin reiterate that I have not granted or allotted timber to any individual or to any firm.

ಅಧ್ಯಕ್ಷರು.—ದಯವಮಾಡಿ ಕೇಳಿ, ಅರಣ್ಯಮಂತ್ರಿಗಳಿಲ್ಲ, ಸ್ವಲ್ಪ ಕಾಯಿರಿ.

ಶ್ರೀ ಎಂ, ಸಿ. ನಾಣಯ್ಯ.—ಆಗಲಿ ಸ್ವಾಮಿ, ಅವರು ಬಂದಾಗ ಕೇಳುತ್ತೇನೆ.

ಶ್ರೀ ಪಿ, ರಾಮದೇವ್.—ನಾಲ್ಕೈದು ದಿವಸದ ಹಿಂದೆ ನಾನು ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆ. ಪಿ.ಯು.ಸಿ. ಎರಡನೇ ವರ್ಷದ ಸಂಬಂಧಗಳು ಪಠ್ಯಪುಸ್ತಕವನ್ನು ರದ್ದುಪಡಿಸಬೇಕೆಂದು ವಿದ್ಯಾರ್ಥಿಗಳು ಸಾಕಷ್ಟು ಚಳುವಳಿ ಮಾಡುತ್ತಿದ್ದಾರೆ. ಇದು ಅನೈತಿಕ ಸಂಬಂಧಗಳನ್ನು ಪ್ರೋತ್ಸಾಹ ಮಾಡತಕ್ಕ ಪುಸ್ತಕವಾಗಿದೆ. ವಿದ್ಯಾಮಂತ್ರಿಗಳು ಇಲ್ಲೇ ಇದ್ದಾರೆ, ಆ ಬಗ್ಗೆ ಉತ್ತರ ಕೊಟ್ಟರೆ ಒಳ್ಳೆಯದು, ಆದರಲ್ಲಿ ಅಶ್ಲೀಲ ಪದಗಳಿವೆ. ಕೆಲವು ವಾಕ್ಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಪುಟ ೧೧ರಲ್ಲಿ ''ಬೆಕ್ಕುಗಳಂ ಬಸಿರಾಗಿ ಹೆರಿಗೆ ಆಸ್ಪತ್ರೆಗೆ ಹೋಗಿರಬೇಕು. ಗಿಡ್ಡನ ಕೈಗಳು ಅವಳ ಉಬ್ಬಿದ ಎದೆಯ ಮೇಲೆ ಸವಾರಿ ಮಾಡಿ... ನಾಳೆ ನೋಡೋಣ ಎಂದ... 'ಅವರಿಗೆ ತಿಂಗಳಿಗೊಮ್ಮೆಯಾದರೂ ದೆವ್ವ ಹಿಡಿಯಬೇಕು... ಪಾಂಡೆಯ ಹೆಂಗಸರಿಗೆಲ್ಲಾ ಸ್ವಾಮಿ ಜಾಡಿಸುತ್ತಾನೆ. ಸರಿಯಾಗಿ''... ''ಹೊಲೆಯರಿಗೆ ಎಷ್ಟಿದೆ ಪೊಗರು...

ಅಧ್ಯಕ್ಷರು. ಅದೆಲ್ಲಾ ಆಯಿತು, ಏನು ಹೇಳಬೇಕೋ ಹೇಳಿ.

ಶ್ರೀ ಪಿ. ರಾಮದೇವ್. ಈ ಪುಸ್ತಕವನ್ನು ವಿತ್‌ಡ್ರಾ ಮಾಡಬೇಕೆಂದು ಚಳುವಳಿ ಮಾಡುತ್ತಿದ್ದಾರೆ,

ಶ್ರೀ ಜಿ, ಬಿ. ಶಂಕರರಾವ್.—ನಮಗೆ ನೋಟೀಸ್ ಬಂದಿಲ್ಲ.

ಅಧ್ಯಕ್ಷರು.—ಸರ್ಕಾರಕ್ಕೆ ನೋಟೀಸ್ ಕಳುಹಿಸಿದ್ದೇವೆ.

SRI G. B. SHANKARA RAO.—I would appeal to the hon. member to pass on those quotings. Sir, it is not a text book. It is only prescribed for reading.

ಅಧ್ಯಕ್ಷರು.—ಪತ್ರಿಕೆಯಲ್ಲಿ ಕೂಡ ಆ ಬಗ್ಗೆ ಬಂದಿದೆ.

SR G. B. SHANKARA RAO.—I have already directed the Director to delete such of the words which are said to be obscene and slang

Circular instructions have also been issued to all the institutions to delete those words.

MR SPEAKER....It may not be slang, it may not be obscene ಅದೆಲ್ಲಾ ಸಂಸ್ಕೃತ ಓದಿರುವವರಿಗೆ ಗೊತ್ತಾಗುತ್ತದೆ. ಅದಲ್ಲ ವಿಚಾರ. ಆ ಕಾಂಟೆಕ್ಸ್ಟ್‌ನಲ್ಲಿ ಮಕ್ಕಳು ಓದಬೇಕೆ? ಆ ವಯಸ್ಸಿನವರು ಓದಬೇಕೆ ಎಂಬುದನ್ನು ವಿಚಾರ ಮಾಡಬೇಕು. ಪತ್ರಿಕೆಗಳಲ್ಲಿ ಕೂಡ ರೀಡರ್ಸ್ ಕಾಲಂನಲ್ಲಿ ಆ ಬಗ್ಗೆ ಬೇಕಾದಷ್ಟು ಬಂದಿವೆ. ಕೆಲವು ಸಾಹಿತಿಗಳು ಇತರರು ಆ ಬಗ್ಗೆ ವಿರೋಧ ಮಾಡಿದ್ದಾರೆ. ಅದು ಸರಿಯಲ್ಲ ಎಂದು ಪ್ರತಿಭಟನೆ ವ್ಯಕ್ತ ಮಾಡಿದ್ದಾರೆ. ತಮಗೆ ನೋಟೀಸ್ ಕೂಡ ಕಳಿಸಿ ಕೊಟ್ಟಿದ್ದೇವೆ.

ಶ್ರೀ ಜಿ. ಬಿ. ಶಂಕರರಾವ್.—ನೋಟೀಸ್ ಬರುವ ಪೂರ್ವದಲ್ಲಿ ಪತ್ರಿಕೆಗಳ ಮುಖಾಂತರ ನೋಡಿದ್ದೇನೆ. ನಿರ್ದೇಶಕರ ಜೊತೆ ಮಾತನಾಡಿದ್ದೇನೆ.

ಅಧ್ಯಕ್ಷರು.—ನಾಳೆ ಕೊನೆ ದಿವಸ ಎಂದು ಪ್ರಸ್ತಾಪ ಮಾಡಿದ್ದಾರೆ. ನಾಳೆ ಹೇಳಿಕೆ ಕೊಡುವು ದಾದರೆ ಸರಿ.

ಶ್ರೀ ಜಿ. ಬಿ. ಶಂಕರರಾವ್.—ನಾಳೆ ತೆಗೆದುಕೊಳ್ಳೋಣ.

ಶ್ರೀ ಎಚ್. ಗಂಗಾಧರನ್ —ನಿಪ್ಪಾಣಿಯಲ್ಲಿನ ಸಕ್ಕರೆ ಕಾರ್ಖಾನೆ ವಿಷಯವಾಗಿ ಒಂದು ಗಮನ ಸೆಳೆಯುವ ಸೂಚನೆ ಕಳುಹಿಸಿಕೊಟ್ಟಿದ್ದೆ, ಒಂದು ತಿಂಗಳ ಹಿಂದೆ ಕೊಟ್ಟಿದ್ದೆ.

ಅಧ್ಯಕ್ಷರು.—ಎಲ್ಲಾ ಕಾಲ್ ಅಟೆಷನ್‌ಗಳನ್ನೂ ಹಾಕುವುದಕ್ಕಾಗುವುದಿಲ್ಲ. ಕೆಲವು ವಿಷಯಗಳಿಗೆ ರಿಪೋರ್ಟ್ ಕಾಲ್‌ಫರ್ ಮಾಡಿದ್ದೇವೆ. ಕೆಲವು ಬಂದಿದೆ, ಕೆಲವು ಬಂದಿಲ್ಲ.

SRI H. GANGADHARAN.—They are going to lose heavy amount. The matter has already been raised in the Council.

ಶ್ರೀ ಆರ್. ಎಸ್. ನಡೋಣಿ.—ನಾನು ಗಮನ ಸೆಳೆಯುವ ಸೂಚನೆಯೊಂದನ್ನು ಕಳಿಸಿ ಮೂರು ದಿವಸವಾಯಿತು. ನಮ್ಮಲ್ಲಿ ಬಿ.ಡಿ ಸನದು ಎಂಬ ಲ್ಯಾಂಡ್ ಟ್ರಿಬ್ಯೂನಲ್ ಸದಸ್ಯರೊಬ್ಬರು ನಾಲ್ಕೈದು ತಿಂಗಳಿದ ನಾಪತ್ತೆಯಾಗಿದ್ದಾರೆ.

ಅಧ್ಯಕ್ಷರು.—ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ.

ಶ್ರೀ ಆರ್. ಎಸ್. ನಡೋಣಿ.—ನಾಳೆ ಅಸೆಂಬ್ಲಿ ಮುಗಿಯುತ್ತಿದೆ. ಉತ್ತರ ಸಿಗದಿದ್ದರೆ ಬಹಳ ಕಷ್ಟ ವಾಗುತ್ತದೆ. ಜನರು ತುಂಬಾ ಕಳವಳದಿಂದಿದ್ದಾರೆ. ಅವರೊಬ್ಬರು ಸಮಾಜ ಸೇವಾಕರ್ತರು ಮತ್ತು ಲ್ಯಾಂಡ್ ಟ್ರಿಬ್ಯೂನಲ್ ಸದಸ್ಯರು.

ಅಧ್ಯಕ್ಷರು —ಸರ್ಕಾರದವರು ಅದರ ಬಗ್ಗೆ ವಿವರ ತರಿಸಬೇಕೋ ಬೇಡವೂ ? ನೀವು ಕೊಟ್ಟಿರುವುದು ಮೊನ್ನೆ. ನೋಡೋಣ, ನಾಳೆ ಉತ್ತರ ಬಂದರೆ ಹಾಕುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಸನ್ಮಾನ್ಯ ಅಧ್ಯಕ್ಷರೆ ೧೧೭ ಜನರಿರುವ ಹರಿಜನ ಸಂಸಾರಗಳು ಬೆಳಗಾವಿಯ ಮಾಳ ಮಾರುತಿಯಲ್ಲಿ ನಿರಾಶ್ರಿತರಾಗಿ ನರಳುತ್ತಿದ್ದಾರೆ. ಹಿಡಕಲ್ ಡ್ಯಾಮ್ ಕೆಳಗೆ ಅವರು ಜಮೀನು ಕಳೆದುಕೊಂಡಿದ್ದಾರೆ ಸರ್ಕಾರದವರು ಆಲ್ಟರ್ನೇಟಿವ್ ಸೈಟ್ ಕೊಡುತ್ತೇವೆ ಎಂದು ಅವರನ್ನು ಕರೆತಂದು ನಿರಾಶ್ರಿತರನ್ನಾಗಿ ಮಾಡಿದ್ದಾರೆ ಅವರಿಗೆ ಇಲ್ಲಿಯವರೆಗೆ ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲ. ಜಮೀನನ್ನೂ ಕೊಟ್ಟಿಲ್ಲ. ಅವರಿಗೆ ಕೂಲಿ ಸಿಗುತ್ತಿಲ್ಲ. ಹೆಂಡತಿ ಮಕ್ಕಳು ಉಪವಾಸದಿಂದ ಸಾಯುತ್ತಿದ್ದಾರೆ. ಅಲ್ಲಿನ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಅವರ ಕಣ್ಣೀರಿನ ಕಥೆ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಅವರಿಗೆ ಸರ್ಕಾರದವರು ಯಾವುದೇ ರೀತಿಯ್ಲೂ ಲ್ಯಾಂಡನ್ನೂ ಕೊಟ್ಟಿಲ್ಲ. ಅವರಿಗೆ ನ್ಯಾಯ ದೊರಕಿಸಿಕೊಡಬೇಕು. ಅವರ ಕಣ್ಣೀರಿನ ಕಣೆಯನ್ನು ತಾವು ತೊಳೆಯುತ್ತೀರಿ ಎಂದು ನಾನು ನಂಬಿದ್ದೇನೆ.

ಶ್ರೀ ಪಂಪಾಪತಿ.—ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಳುವಳಿ ನಡೆಸುತ್ತಿದ್ದಾರೆ. ಉಪವಾಸ ಸತ್ಯಾಗ್ರಹ ಮಾಡಿ ಕೆಲವರು ಆಸ್ಪತ್ರೆಗೆ ಹೋಗಿದ್ದಾರೆ.

ಅಧ್ಯಕ್ಷರು.—ಮಂತ್ರಿಗಳು ಉತ್ತರ ಕೊಟ್ಟಿದ್ದಾರಲ್ಲ. ಇನ್ನೇನು ಬೇಕು ?

ಶ್ರೀ ಪಂಪಾಪತಿ.—ಸರಿಯಾದ ಉತ್ತರ ಸಿಕ್ಕಿಲ್ಲ ಎಂದು ಅವರು ಉಪವಾಸ ಸತ್ಯಾಗ್ರಹ ಮುಂದುವರೆಸುತ್ತಿದ್ದಾರೆ. ದಯವಿಟ್ಟು ಈ ಬಗ್ಗೆ ಪರಿಹಾರ ಕಂಡುಹಿಡಿಯಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಗಮನ ಹರಿಸಬೇಕು.

೨–೩೦ ಪಿ.ಎಂ.

ಅಧ್ಯಕ್ಷರಂ.— ಮಾನ್ಯ ಮಂತ್ರಿಗಳು ವಿಚಾರ ಮಾಡುತ್ತಿದ್ದೇವೆಂದು ಹೇಳಿದ್ದಾರೆ.

ಶ್ರೀ ಎಂ. ಶೇರ್‌ಖಾನ್.—ನಾನೊಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. ಹೈದ್ರಾಬಾದ್ ಕರ್ನಾಟಕದ ಡೆವಲಪ್‌ಮೆಂಟ್ ಅಥಿಕಾರಿಗೆ ಹೈಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಪ್ರಮೋಷನ್ ಕೊಡ ಬೇಕಾಗಿತ್ತು.

ಅಧ್ಯಕ್ಷರು.—ತಾವು ಕೊಟ್ಟ ನೋಟೀಸ್ ಗಮನ ಸೆಳೆಯುವ ಸೂಚನೆಗೆ ಅರ್ಹವಾಗಿದ್ದರೆ ಅದನ್ನು ಅಡ್ಮಿಟ್ ಮಾಡುತ್ತೇವೆ. ಇಲ್ಲದಿದ್ದರೆ ಗಮನ ಸೆಳೆಯುವ ಸೂಚನೆ ಹೇಗೆ ಆಗುತ್ತದೆ ?

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ಬಳಿ ಇರುವ ಇಸ್ರೋ ಮಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸಾವಿರಾರು ಹುಡುಗರಿದ್ದಾರೆ. ಅಲ್ಲಿ ಸರಿಯಾದ ಲ್ಯಾಬೊರೇಟರಿ ಇಲ್ಲ ಮ್ಯಾನೇಜ್‌ಮೆಂಟಿನವರಂ ಕಿರುಕುಳ ಕೊಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಲ್ಲಿ ಹಾಸ್ಟೆಲ್ ವ್ಯವಸ್ಥೆ ಇದೆ. ಆದರೆ ಊಟ ಇಲ್ಲ. ಲ್ಯಾಬೊರೇಟರಿ ಇಲ್ಲ. ಪುಸ್ತಕಗಳು ಇಲ್ಲ.

ಅಧ್ಯಕ್ಷರು.—ರಿಪೋರ್ಟ್ ಕಾಲ್ಬರ್ ಮಾಡಿದ್ದೇವೆ. ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ನಾನು ಕೆಎಸ್‌ಆರ್‌ಟಿಸಿ ಬೇಡಿಕೆ ಬಗ್ಗೆ ಚರ್ಚೆ ಮಾಡುವಾಗ ಸಾರಿಗೆ ಮಂತ್ರಿಗಳು...

ಅಧ್ಯಕ್ಷರು —ನಾನು ಈ ಬಗ್ಗೆ ಸಾರಿಗೆ ಮಂತ್ರಿಗಳ ಜೊತೆ ಮಾತನಾಡಿದ್ದೇನೆ. ಅವರು ಆ ಬಗ್ಗೆ ಫೈಲ್ ತರಿಸಿ ನನ್ನ ಜೊತೆ ಪ್ರಸ್ತಾಪ ಮಾಡಿದ್ದಾರೆ ತಾವು ನನ್ನ ಕೊಠಡಿಗೆ ಬನ್ನಿ. ಅಲ್ಲಿ ಆ ಬಗ್ಗೆ ಪ್ರಸ್ತಾಪ ಮಾಡೋಣ.

ಶ್ರೀ ಎಚ್.ಡಿ. ದೇವೇಗೌಡ.—ನಿನ್ನೆ ನಾನು ಪ್ರಸ್ತಾಪಿಸಿದ ಸರ್ವೀಸ್ ವಿಷಯದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವರೇ ?

ಅಧ್ಯಕ್ಷರು.—ಆ ಬಗ್ಗೆ ನಾಳೆ ಪ್ರಸ್ತಾಪ ಮಾಡುತ್ತಾರೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—೧೫ ದಿವಸಗಳ ಹಿಂದೆ ನಾನು ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿದ್ದೆ. ಒಂದೂ ಬರಲಿಲ್ಲ. ಸಿರಸಿ ಬಸ್ ನಿಲ್ದಾಣದ ಬಗ್ಗೆ, ಸಿನೇ ತರಗತಿಯಿಂದ ೭ನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ...

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.—ಮೇಜರ್ ಇರಿಗೇಷನ್ ಡಿವಿಷನ್‌ನ್ನು ಶಿಫ್ಟ್ ಮಾಡಿರುವ ಬಗ್ಗೆ ಮಂಡ್ಯ ಮತ್ತು ಮೈಸೂರಿನ ೧೦ ಜನ ಶಾಸಕರು ನೋಟೀಸ್ ಕೊಟ್ಟಿದ್ದೇವೆ.

ಅಧ್ಯಕ್ಷರು —ಈ ಬಗ್ಗೆ ಇನ್ನೂ ಉತ್ತರ ಬಂದಿಲ್ಲ. ನಾವು ಸರ್ಕಾರಕ್ಕೆ ಕಳುಹಿಸಿದ್ದೇವೆ. The concerned Minister has to look into all these things. Otherwise I will be cross-examined like this in this august House. The Ministers have to keep separate files for calling attention notices. In these matters, you have to pull up your Private Secretaries. I cannot ask every hon. Member to come and meet me in my chambers.

ಶ್ರೀ ವಿ.ಬಿ. ಭಾವಿ.—ಅಧ್ಯಕ್ಷರೇ, ಕಳೆದ ಒಂದೂವರೆ ತಿಂಗಳ ಹಿಂದೆ ನಾನು ನೋಟೀಸ್ ಕಳು ಹಿಸಿದ್ದೆ. ಮಹಾರಾಷ್ಟ್ರ ಸರ್ಕಾರದವರು, ಆ ಏರಿಯಾದಲ್ಲಿ ಇರುವ ಕನ್ನಡಿಗರಿಗೆ ಕನ್ನಡ ಪ್ರೈಮರಿ ಶಾಲೆಗಳನ್ನು ಪ್ರಾರಂಭ ಮಾಡಬಾರದು ಎಂದು ಆಜ್ಞೆ ಮಾಡಿದ್ದಾರೆ. ಅದನ್ನು ಕುರಿತು ಮಾನ್ಯ ಸಚಿವರ ಗಮನವನ್ನು ಸೆಳೆದಿದ್ದೆ. ಇದುವರೆವಿಗೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದರಿಂದ ಅದನ್ನು ಆಡ್ಮಿಟ್ ಮಾಡಿಲ್ಲ. ಈ ಬಗ್ಗೆ ಪ್ರಸ್ತಾಪ ಬಂದಿದ್ದುದರಿಂದ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಈ ವಿಷಯದ ಬಗ್ಗೆಯೇ ನಾನು ನೋಟೀಸ್ ಕೊಟ್ಟಿದ್ದೇನೆ. ಬಿಜಾಪುರ ಹಾಗೂ ಶೋಲಾಪುರ ಜಿಲ್ಲೆಗಳಲ್ಲಿ ಕನ್ನಡಿಗರು ಅವಂರಣಾಂತ ಸತ್ಯಾಗ್ರಹ ಮಾಡುತ್ತಿದ್ದಾರೆ.

ಅಧ್ಯಕ್ಷರು.—ತಾವು ಇವತ್ತು ನೋಟೀಸ್ ಕೊಟ್ಟಿದ್ದೀರಿ. ನೋಡೋಣ.

Papers laid on the table

SRI G B. SHANKAR RAO.—On behalf of the Hon. Chief Minister, I lay:

Order No. HD 126 CNA 80 dated 21st July, 1982.

Exemption of tax for the exhibition of 35 mm. feature films for the Policeman and their family members in the open theatre at District Armed Reserve, Shimoga, as required under Section 22 of the Karnataka Cinemas (Regulation) Act, 1964.

MR. SPEAKER.—Papers laid.

MR. SECRETARY.—I beg to lay on the table of the House the Fourth List of Unstarred Questions and Answers of Seventh Session.

MR. SPEAKER.—Papers laid.

CALLING ATTENTION TO MATTERS OF URGENT PUBLIC IMPORTANCE

(i) *Issue of Spoiled rice to the Taluk Agricultural Produce Marketing Co-operative Socicty, Hassan.*

SRI K.H. HANUMEGOWDA.—I call the attention of the Minister for Food and Civil Supplies regarding issue of 100 quintals of spoiled rice to the Taluk Agricultural Produce Marketing Co-operative Society, Hassan by the authorities of the Food Corporation of India Shimoga Branch.

SRI MANIK RAO PATIL.—Sir, I wish to make the following statement:

೧. ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಎಚ್. ಹನುಮೇಗೌಡ ಅವರು ಮತ್ತು ಪಿ.ಎನ್. ರೆಡ್ಡಿ ಯವರು ಕೇಳಿರುವ ಈ ಪ್ರಶ್ನೆ ಬಗ್ಗೆ ವಿಚಾರಿಸಲಾಗಿದೆ. ವಿವರಗಳು ಹೀಗಿದೆ.—